

ಶಂಭಟ್ಟರು 'ನಿಮ್ಮದು ಜೇಷ್ಠ ನಕ್ಷತ್ರ ತಾನೇ? ನಿಮ್ಮ ಹೆಂಡತಿಯದ್ದು ಶತಭಿಷ ನಕ್ಷತ್ರ ಅಲ್ಲವೇ?' ಎಂದು ತನ್ನ ನೆನಪಿನಿಂದ ಈಶ್ವರ ಭಟ್ಟ ದಂಪತಿಯ ಜನ್ಮನಕ್ಷತ್ರಗಳನ್ನು ಹೇಳುತ್ತಾ ಪಂಚಾಂಗ ಬಿಡಿಸಿ 'ಮುಂದಿನ ಸೋಮವಾರ ಅಲ್ಲ ಅದರ ಮುಂದಿನ ಸೋಮವಾರ ಪ್ರಶಸ್ತ ದಿನ ಇದೆ. ಈಶ್ವರನಿಗೆ ಸೋಮವಾರ ಅಂದರೆ ಇಷ್ಟವೇ!' ಎಂದು ಮುಗುಳ್ನಗೆ ಬೀರಿ, 'ದೇವರಿಗೆ ಅಭಿಷೇಕ ಮಾಡುವ ಶಂಖಕ್ಕೆ ಬೆಳ್ಳಿ ಕಟ್ಟಿಸಬೇಕು ಎನ್ನುವುದು ನಿಮಗೆ ಗೊತ್ತು. ಇದಕ್ಕೂ ಬೆಳ್ಳಿ ಕಟ್ಟಿಸಿ. ಸಾಧ್ಯವಾದರೆ ಚಿನ್ನದ್ದು ಕಟ್ಟಿಸಿದರೆ ಇನ್ನೂ ಶ್ರೇಷ್ಠ' ಎಂದರು.

ಈಶ್ವರ ಭಟ್ಟರು 'ಅದಕ್ಕೇನು ಸ್ವಾಮಿ? ದೇವರು ಕೈ ತುಂಬ ಕೊಟ್ಟಿದ್ದಾನೆ' ಎಂದು ನಕ್ಕು 'ಹತ್ತು ಗ್ರಾಮ್ಸ್ ಚಿನ್ನ ಬೇಕಾದೀತು, ಅಲ್ವಾ?' ಎಂದು ಪ್ರಶ್ನಿಸಿದರು. 'ಗೊತ್ತಿಲ್ಲ!' ಎಂದ ಶಂಭಟ್ಟರು 'ಇಂಥ ಕೆಲಸಕ್ಕೆ ನೀವು ಸರಾಪು ಕಟ್ಟೆಗೆ ಹೋಗುವುದು ಬೇಡ. ನಮ್ಮ ಜನ್ನಾಚಾರಿ ಇದ್ದಾನಲ್ಲ ಸೀತಾಪುರದ ಬೀದಿಯಲ್ಲಿ, ಅವನಲ್ಲೇ ಮಾಡಿಸಿ' ಎಂಬ ಸಲಹೆ ನೀಡಿದರು. ಶಾಂತಿಮೂಲೆ ಈಶ್ವರ ಭಟ್ಟರು ಸೀತಾಪುರ ಗ್ರಾಮದ ಒಂದು ದೊಡ್ಡ ಕುಳ. ಅಡಿಕೆ ಕೊಯ್ಲಿನ ಸಂದರ್ಭದಲ್ಲಿ ಒಂದರ್ಧ ಫರ್ಲಾಂಗಿನಷ್ಟು ಉದ್ದ ಅಗಲ ಇರುವ ಅವರ ಅಂಗಳ ತುಂಬ ಹಣ್ಣಡಿಕೆ ಇರುತ್ತದೆ ಎನ್ನುವುದರಿಂದ, ಅವರ ಶ್ರೀಮಂತಿಕೆಯನ್ನು ಯಾರೂ ತರ್ಕಿಸಬಹುದು. ಹಾಗೆಂದು ಅವರು ತನ್ನ ದೊಡ್ಡಸ್ತಿಕೆಯನ್ನು ಪ್ರದರ್ಶನಕ್ಕೆ ಇಡುವುದಿಲ್ಲ. ನಯ ವಿನಯದಿಂದಲೇ ಎಲ್ಲರನ್ನೂ ಮಾತನಾಡಿಸುವುದರಿಂದ, ಸೀತಾಪುರದ ಕೆಲವೇ ಕೆಲವು ಹಿರಿಯರನ್ನು ಬಿಟ್ಟರೆ, ಹೆಚ್ಚಿನವರು ಅವರನ್ನು 'ಈಶ್ವರಣ್ಣ' ಎಂದೇ ಸಂಬೋಧಿಸುತ್ತಾರೆ. ಸ್ವತಃ ಶಂಭಟ್ಟರೇ ಅವರಿವರವರಲ್ಲಿ ಮಾತನಾಡುವಾಗ 'ಈಶ್ವರಣ್ಣಂದು ರಾಜಮರ್ಜಿ ಮಾರಾಯರೇ' ಎನ್ನುವುದುಂಟು!

ಇಂಥ ಈಶ್ವರ ಭಟ್ಟರು ಎರಡು ಮೂರು ವರುಷಕ್ಕೊಮ್ಮೆ 'ಶತರುದ್ರಾಭಿಷೇಕ'ವನ್ನು ತಮ್ಮ ಮನೆಯಲ್ಲಿ ಅದ್ದೂರಿಯಾಗಿ ಮಾಡಿಸುತ್ತಾ ಬಂದಿದ್ದರು. ಹಾಗೆಯೇ ಸೀತಾಪುರದಲ್ಲಿ ವರುಷಕ್ಕೊಮ್ಮೆ ಅಥವಾ ಎರಡು ವರುಷಕ್ಕೊಮ್ಮೆ ಶತರುದ್ರಾಭಿಷೇಕ ಮಾಡಿಸುವವರು ಆರೇಳು ಮಂದಿ ಇರುವರಾದರೂ, ಅವೆಲ್ಲ 'ಕಟ್ಟು ಕಟ್ಲೆ' (ತೀರಾ ಸಾಮಾನ್ಯ) ಎಂಬಂತೆ ಇರುತ್ತವೆ. ಅಂದರೆ ಕಟ್ಟು ಕಟ್ಲೆಯ ಶತರುದ್ರಾಭಿಷೇಕಕ್ಕೆ ನೆರೆಕರೆಯ ನಾಲ್ಕು ಮನೆಗಳಿಗೆ ಮಾತ್ರ ಆಮಂತ್ರಣ ಇದ್ದರೆ ಈಶ್ವರ ಭಟ್ಟರದ್ದು ಹಾಗಲ್ಲ! ಇಡೀ ಊರಿನ ಮಂದಿಯನ್ನು ಆಹ್ವಾನಿಸಿ ಶಿವಪೂಜೆಯ ನಂತರ ಭರ್ಜರಿ ಭೋಜನವನ್ನು ಏರ್ಪಡಿಸುತ್ತಾರೆ. ಆ ದಿನ ಬಂದವರಿಗೆ ಒಂದಿಷ್ಟು ಮನೋರಂಜನೆಯೂ ಇರಲಿ ಎಂಬಂತೆ ಊಟದ ನಂತರ ಪ್ರಸಿದ್ಧ ಯಕ್ಷ ಕಲಾವಿದರಿಂದ ತಾಳಮದ್ದಳೆ ಕೂಟ ಇರಬೇಕು ಎನ್ನುವಂತೆ ಶಿವಪೂಜೆಗೆ ಒಂದು ಸಂಭ್ರಮವನ್ನೂ ಅವರು ತಂದುಕೊಡುತ್ತಾರೆ. ಸಾಮಾನ್ಯ ಮಂದಿಯ ಶತರುದ್ರಾಭಿಷೇಕಕ್ಕೆ ಹತ್ತೈವತ್ತು ಸಾವಿರ ರೂಪಾಯಿ ಸಾಕಾದರೆ, ಈಶ್ವರ ಭಟ್ಟರ ಶತರುದ್ರಾಭಿಷೇಕಕ್ಕೆ ನಾಲ್ಕೈದು ಲಕ್ಷ ರೂಪಾಯಿ ಬೇಕು ಎಂದು ಅಂದಾಜಿಸುವವರು ಸೀತಾಪುರದಲ್ಲಿ ಸಾಕಷ್ಟು ಮಂದಿ ಇದ್ದಾರೆ.

ಬಲಮುರಿ ಶಂಖವು ಅನಾಯಾಸವಾಗಿ, ಅಂದರೆ ಕಷ್ಟಪಟ್ಟು ಹುಡುಕಿದರೂ ಸಿಕ್ಕದೇ ಇರುವ ಸಂದರ್ಭದಲ್ಲಿ ಆಕಸ್ಮಿಕವಾಗಿ ಸಿಕ್ಕಿತು ಎಂಬಂತೆ ಈಶ್ವರ ಭಟ್ಟರಿಗೆ ಅದು ಸಿಕ್ಕಿದ್ದರಿಂದ ವಿಶೇಷ ಸಂತಸಪಟ್ಟರು. ಹಾಗಾಗಿ ಅವರು ಈ ಸಲದ ಶತರುದ್ರಾಭಿಷೇಕವನ್ನು ಹಿಂದಿಗಿಂತಲೂ ಒಂದು ಗುಲಗುಂಜಿ ತೂಕದಲ್ಲಿ ಹೆಚ್ಚೇ ಎನ್ನುವಂತೆ ಮಾಡಿಸಿದರು. ನಡುನಡುವೆ ಆಪ್ತೇಷ್ಟರಲ್ಲಿ ತನ್ನ ಭಾವ ಅಪರೂಪದ ಬಲಮುರಿ ಶಂಖವನ್ನು ಕಾಶಿಯಿಂದ ತಂದುಕೊಟ್ಟ ಬಗೆಯನ್ನು ವರ್ಣಿಸಿ 'ಪ್ರಾಯಃ ಇಷ್ಟು ಚಂದದ ಬಲಮುರಿ ಶಂಖ ನಾನು ನೋಡಿದ್ದು ಎಲ್ಲೂ ಇಲ್ಲ ಇವರೇ!' ಎಂದು ಹತ್ತಾರು ಜನರಲ್ಲೂ ಹೇಳಿದರು.

ಸಾಮಾನ್ಯವಾಗಿ ದೇವರಿಗೆ ಅಭಿಷೇಕ ಮಾಡುವ ಶಂಖಗಳ ಮುಖಗಳು ಎಡಬದಿಯಲ್ಲೇ ಇರುತ್ತವೆ. ಹಾಗಾಗಿ ಅಂಥ ಶಂಖದಲ್ಲಿ ತುಂಬಿಸಿ ಹೊಯ್ಯುವ ನೀರು, ಎಡಬದಿಯಲ್ಲೇ ಬರುತ್ತದೆ. ಆದರೆ ಬಲಮುರಿ ಶಂಖವು ಇದಕ್ಕೆ ವಿರುದ್ಧವಾಗಿ ಇದ್ದು ಅದರಲ್ಲಿ ತುಂಬಿಸಿದ ನೀರು ಬಲಬದಿಯಿಂದ ಬೀಳುವುದರಿಂದ ಆ ಶಂಖದ ನೀರು ದೇವರ ಅಭಿಷೇಕಕ್ಕೆ ಅಥವಾ ತೀರ್ಥಪ್ರೋಕ್ಷಣೆಗೆ ಶ್ರೇಷ್ಠ ಎಂಬ ನಂಬುಗೆ ಸೀತಾಪುರದ ಜನರಲ್ಲಿ ಇತ್ತು. ಈಶ್ವರ ಭಟ್ಟರು ಜನ್ನಾಚಾರಿಯಿಂದ ಆ ಬಲಮುರಿ ಶಂಖದ ಹಿಂಭಾಗ ಮತ್ತು ನೀರು ಹೊರ ಬರುವ ಮುಂಭಾಗವನ್ನು ಚಿನ್ನದಿಂದ ಮುಚ್ಚಿಸಿ ಪುರೋಹಿತರಲ್ಲಿ ಶತರುದ್ರದ ಅಭಿಷೇಕಕ್ಕೆ ಅದನ್ನೇ ಬಳಸಿ ಎಂದಿದ್ದರು. ಅದು ಹಾಗೇ ನಡೆದ ಮೇಲೆ ಶಂಭಟ್ಟರು ಈಶ್ವರ ಭಟ್ಟರನ್ನು ಹತ್ತಿರ ಕರೆದು 'ಶಂಖಕ್ಕೆ ಚಿನ್ನ ಮುಚ್ಚಿಸಿದ್ದಕ್ಕೆ ಎಷ್ಟಾಯಿತು?' ಎಂದು ಕುತೂಹಲದಿಂದ ಪ್ರಶ್ನಿಸಿದರು. ಈಶ್ವರ ಭಟ್ಟರು 'ಒಂದಷ್ಟು ಆಯಿತು ಭಟ್ರೇ' ಎಂದು ತೇಲುಮಾತನ್ನು ಆಡಿ, ಆಮೇಲೆ 'ಹದಿನೈದು ಗ್ರಾಮ್ಸ್ ಚಿನ್ನ ಬೇಕಾಯಿತು ನೋಡಿ' ಎಂದರು. ಆಗ ಶಂಭಟ್ಟರ ಕೈಯಲ್ಲಿದ್ದ ಶಂಖವನ್ನು 'ಇಲ್ಲಿ ಕೊಡಿ ನಾನೊಮ್ಮೆ ನೋಡುತ್ತೇನೆ' ಎಂದು ಹೇಳಿದ ಪರಿಕರ್ಮಿ ಶಂಕರ ಶಂಖವನ್ನು ಹಿಂದೆ ಮುಂದೆ ತಿರುಗಿಸಿ ನೋಡಿ 'ಹಾಗಾದರೆ ಈ ಶಂಖಕ್ಕೆ ಈಗ ಎರಡು ಲಕ್ಷ ರೂಪಾಯಿ ಬೆಲೆ ಕಟ್ಟಬಹುದು!' ಎಂದು ಈಶ್ವರ ಭಟ್ಟರ ಮುಖ ನೋಡಿದ. ಈಶ್ವರ ಭಟ್ಟರು 'ಹೌದು' ಎಂದು ನಕ್ಕರು. ಆದರೆ ಶಂಭಟ್ಟರು ನಗದೆ, 'ನಮಗೆ ಬೇಕೇಬೇಕೆಂದು ಕೊಂಡುಕೊಂಡ ವಸ್ತುವಿಗೆ ಮತ್ತೆ ಬೆಲೆ ಕಟ್ಟಬಾರದು ಶಂಕರ. ಅದು ಮಾರಲಿಕ್ಕೆ ಇರುವುದಲ್ಲವಲ್ಲ?' ಎಂದರು.

ಶಂಕರನಿಗೆ ಅದು ಮುಖಭಂಗವಾದ ಹಾಗೆ ಆಗಿತ್ತು. ಆತ ಅದಕ್ಕೆ ಪ್ರತಿಕ್ರಿಯಿಸದೆ ಸುಮ್ಮನಾದ. ಶಂಕರನು ಶಂಭಟ್ಟರ ಬಲಗೈಬಂಟ ಅಂದರೆ ಪರಿಕರ್ಮಿ. ಶಂಕರ ಇಲ್ಲದೆ ಶಂಭಟ್ಟರು ಎಲ್ಲೂ ಪೌರೋಹಿತ್ಯಕ್ಕೆ ಹೋಗುತ್ತಿರಲಿಲ್ಲ ಎಂಬಂತಿತ್ತು ಅವರ ಸಂಬಂಧ. ಅವರು ಎಲ್ಲೇ ಹೋಗಿ ಏನೇ ಧಾರ್ಮಿಕ ಕೆಲಸ ಮಾಡಲಿ, ಅಲ್ಲಿ ಅವರ ಬೇಕು ಬೇಡಗಳನ್ನು ಯಾವಾಗ ಹೇಗೆ ಪೂರೈಸಬೇಕು ಎನ್ನುವುದನ್ನು ಶಂಕರನಷ್ಟು ಸಮರ್ಥವಾಗಿ ಹೊಂದಿಸಿಕೊಡುವವರು ಸೀತಾಪುರದಲ್ಲಿ ಬೇರೊಬ್ಬರಿರಲಿಲ್ಲ. ಅವನು ವೈದಿಕ ಕರ್ಮದಲ್ಲಿ ತನ್ನ ಜೊತೆ ಇಲ್ಲದಿದ್ದರೆ ಶಂಭಟ್ಟರು ತನ್ನ 'ಕೈ ಮುರಿದ ಹಾಗೆ' ಎನ್ನುವುದೂ ಇತ್ತು. ಈಶ್ವರ ಭಟ್ಟರು ಶತರುದ್ರಾಭಿಷೇಕ ಕಾರ್ಯಕ್ರಮದ ನಂತರ ತಾಳಮದ್ದಳೆಯ ಪ್ರಾರಂಭಿಸಿ ಅದು ಮುಗಿದ ಮೇಲೆ ಎಲ್ಲರೂ ತಂತಮ್ಮಲ್ಲಿಗೆ ಹೊರಟು ಹೋದ ಸಂಭ್ರಮದಿಂದ ಬೀಗಿ ಹೆಂಡತಿ ದೇವಕಿಯನ್ನು ಕರೆದು 'ಹೇಗಾಂತು ಒಪ್ಪಕ್ಕ ಕಾರ್ಯಕ್ರಮ?' ಎಂದು ಪ್ರಶ್ನಿಸಿದರು. ಅವರು ಒಪ್ಪಕ್ಕ ಎಂದು ಹೆಂಡತಿಯನ್ನು ಒಮ್ಮೊಮ್ಮೆ ಭಾವವೇಶದಲ್ಲಿ ಕರೆಯುವುದಿತ್ತು. ಅದು ಅವರ ಪತ್ನಿ ದೇವಕಿ ಅಮ್ಮನಿಗೂ ಗೊತ್ತಿತ್ತು.

ದೇವಕಿ ಅಮ್ಮ 'ಭಾರಿ ಊಚು ಆಯಿದು. ನಮ್ಮ ಮನೇಲಿ ಇಂಥ ಕಾರ್ಯಕ್ರಮ ಆನು ಮದುವೆ ಆಗಿ ಬಂದ ಮೇಲೆ ಆಯಿದಿಲ್ಲೆ ಹೇಳಿ ಕಾಣುತ್ತು' (ಭಾರಿ ಚೆನ್ನಾಗಿ ಆಗಿದೆ. ನಮ್ಮ ಮನೆಯಲ್ಲಿ ನಾನು ಮದುವೆ ಆಗಿ ಬಂದ ಮೇಲೆ ಇಂಥ ಕಾರ್ಯಕ್ರಮ ಆಗಲಿಲ್ಲ ಎಂದು ನನಗೆ ಕಾಣುತ್ತದೆ) ಎಂದರು.

'ಅಪ್ಪಾ?' (ಹೌದು?) ಎಂದು ಮತ್ತೆ ಬೀಗಿದ ಈಶ್ವರ ಭಟ್ಟರು ಕಾರ್ಯಕ್ರಮದ ಬಗ್ಗೆ ಯಾರ್ಯಾರು ಏನೇನು ಹೇಳಿದರು? ಎಂದು ಹೆಂಡತಿಯ ಮುಂದೆ ತಮಗೆ ಬಂದ ಶಿಫಾರಸ್ಸಿನ ಬಗ್ಗೆ ಸಾಕಷ್ಟು ಆಡಿದರು. ಅಷ್ಟರಲ್ಲಿ ಅವರಿಗೆ ಚಿನ್ನ ಮುಚ್ಚಿಸಿದ್ದ ಬಲಮುರಿ ಶಂಖದ ನೆನಪಾಯಿತು. ಅವರು 'ಒಪ್ಪಕ್ಕ, ಆ ಶಂಖ ಜಾಗ್ರತೆ ಇಟ್ಟಿದ್ದಿ ತಾನೇ? ಒಮ್ಮೆ ಒಳಗೆ ಹೋಗಿ ನೋಡಿ ಬಾ?' ಎಂದು ಹೆಂಡತಿಗೆ ಆದೇಶಿಸಿದರು. ದೇವಕಿ ಅಮ್ಮ 'ಇಲ್ಲ ನಾನು ದೇವರ ಗುಂಡದ ಶತರುದ್ರಾಭಿಷೇಕ ಮುಗಿದ ಮೇಲೆ ಆಚೆ ಮುಖ ಮಾಡಲಿಲ್ಲ. ನೀವೇ ಅದನ್ನು ಇಟ್ಟಿದ್ದೀರಿ ಎಂದುಕೊಂಡೆ' ಎಂದರು.

ಈಶ್ವರ ಭಟ್ಟರಿಗೆ ದಿಗಿಲಾಯಿತು. ಅವರುದೇವರ ಗುಂಡದ ಆಚೆ ದೌಡಾಯಿಸಿದರು. ಅಲ್ಲಿ ಅವರ ಬಲಮುರಿ ಶಂಖ ಕಾಣಲಿಲ್ಲ. 'ಅರೇ! ಏನಾಯಿತು? ಎಲ್ಲಿ ಇಟ್ಟಿರಬಹುದು ಆ ಪರಿಕರ್ಮಿ ಶಂಕರ ಶಂಖವನ್ನು?' ಎಂದು ಇಡೀ ದೇವರ ಕೋಣೆಯನ್ನು ಹುಡುಕಿದ ಅವರು 'ದೇವಕಿ ನೀನೂ ಬಾ, ಶಂಖ ಕಾಣುವುದಿಲ್ಲವಲ್ಲ ಇಲ್ಲಿ?' ಎಂದು ಹೆಂಡತಿಯನ್ನು ಕರೆದರು. ಇಬ್ಬರೂ ಮತ್ತೆ ದೇವರ ಕೋಣೆಯ 'ಸಮಸ್ತ'ವನ್ನೂ ಹುಡುಕುವಂತೆ ಹುಡುಕಿದರು. ಆದರೆ ಬಲಮುರಿ ಶಂಖ ಅಲ್ಲಿ ಎಲ್ಲೂ ಕಾಣಲಿಲ್ಲ. ಅಷ್ಟರಲ್ಲಿ ದೇವಕಿ ಅಮ್ಮನಿಗೆ ಒಂದು ನೆನಪು ಬಂತು. ಆಕೆ ಪರಿಕರ್ಮಿ ಶಂಕರನಲ್ಲಿ ಶಂಖವನ್ನು ಜಾಗ್ರತೆ ಇಡಿ ಎಂದವರು

